Sri P. F. D'MELLOW.—Are the Government aware that in the buses plying between Kolar Gold Fields and Bangalore it is the practice to ask the passengers who have already paid for their tickets to get out and stand while mails are being loaded ?

Sri D. DEVARAJ URS.—I am not aware.

ಶ್ರೀ ಬಿ. ಚನ್ನಬೈರೇಗೌಡ.—ಸರ್ಕಾರಿ ಬಸ್ಸಿನಲ್ಲಿ ಟಿಕೆಟ್ ಇಲ್ಲದೇ ಇರುವ ಪ್ಯಾಸಂಜರ್ಸ್ ಮೇಲೆ ಕ್ರಮ ನಡೆಸಿ, ಅವರನ್ನು ಕೋರ್ಟಿಗೆ ಕಳುಹಿಸಿ ಜುರ್ಮಾನೆ ಹಾಕುತ್ತಾರೆ. ಎಷ್ಟೆಷ್ಟು ಜುರ್ಮಾನೆ ಆಯಿತು ಎಂದು ಪತ್ರಿಕೆಗಳಲ್ಲಿ ಪ್ರಕಟಿಸಿದರೆ ಪ್ಯಾಸೆಂಜರ್ಸ್ ಟಿಕೆಟ್ ಪಡೆಯುತ್ತಾರೆ. ಆಗ ಕಂಡಕ್ಟರ್ಸ್ ಹಾಗೆ ಮಾಡುವುದಿಲ್ಲ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಅವುಕೆಲವು ಸಂದರ್ಭಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟಣೆ ಆಗುತ್ತವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಪತ್ರಿಕೆಗಳಲ್ಲಿ ಪ್ರಕಟಣೆ ಮಾಡದಿದ್ದರೆ ಜನರಿಗೆ ಹೇಗೆ ಗೊತ್ತಾಗಬೇಕು ? ಇಲ್ಲಿ ಕೊಟ್ಟಿರುವ ಉತ್ತರ ಸರಿಯೇ ?

Sri D. DEVARAJ URS.—The question is: "whether it is a fact that the passengers who travel in M. S. R. T. C. buses without possessing tickets though they have paid money for the tickets are being prosecuted". Generally we do not. Specific instances might be there. To very plain, the rule says that a person who travels without ticket is deemed to have committed an offence. Whether he has bought a ticket or not is not the question; whether he possesses a valid ticket or not is the question. If he does not possess a valid ticket, he commits an offence. We will take a liberal view. If he has paid, we will verify and the codnuctor will be hauled up for not giving ticket. That is why I said "no".

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಕೆಲವು ಕಂಡಕ್ಟರ್ಸ್ ದುಡ್ಡು ತೆಗೆದುಕೊಂಡು ಟಿಕೆಟ್ ಕೊಡುವುದಿಲ್ಲ. ಇದು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ನಡೆಯುತ್ತದೆ. ಈಗ ಇರತಕ್ಕ ರೂರ್ಸ್ ಪ್ರಕಾರ ಅವರಿಗೆ ಕೊಡತಕ್ಕ ಶಿಕ್ಷೆ ಉಗ್ರವಾದುದಲ್ಲ. ದುಡ್ಡು ತೆಗೆದುಕೊಂಡು ಅಲ್ಲ ಜನಗಳಿಗೆ ಟಿಕೆಟ್ ಕೊಡದೇ ಹೋದರೆ ಅಂತಹ ಕಂಡಕ್ಟರಿಗೆ ಉಗ್ರವಾದ ಶಿಕ್ಷೆ ಕೊಡುವುದಕ್ಕೆ ಕಾನೂನನ್ನು ಮಾರ್ಪಡಿಸುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಕಂಡಕ್ಟರ್ ದುಡ್ಡು ತೆಗೆದುಕೊಂಡು ಕೊಟ್ಟಿಲ್ಲ ಎಂದು ಕಂಪ್ಲೈಂಟ್ ಮಾಡಿದರೆ ಅಂತಹವರಿಗೆ ಯಾವರೀತಿ ಉಗ್ರವಾದ ಶಿಕ್ಷೆ ಕೊಡಬೇಕೋ, ಕೊಡೋಣ

———

Running of M.S.R.T.C. Buses in Bellary District.

*Q.—241. Sri C. M. REVANASIDDIAH (Siruguppa).—

Will the Minister for Transport and Tourism be pleased to state :—

(*a*) whether they would make arrangements to run M.S.R.T.C. buses in all the old routes that existed before nationalisation in Bellary district for the convenience of the travelling public;

(*b*) whether action would also be taken to construct Bus shelters in the bus stands for the use of the travelling public ?

A.—Sri D. DEVARAJ URS (Minister for Transport and Tourism).—

(*a*) Yes, except the Inter State and a few of the Inter-District routes.

(*b*) Yes.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಬಳ್ಳಾರಿ ಜಿಲ್ಲೆಯಲ್ಲಿ ಮೊದಲು ಇದ್ದ ರೂಟ್‌ಗಳನ್ನು ಬಿಟ್ಟು ಬಿಟ್ಟು ನಿಮಗೆ ಅನುಕೂಲ ಇದ್ದ ರೀತಿಯಲ್ಲಿ ಜನಗಳಿಗೆ ಅನಾನುಕೂಲವಾದರೂ ಸರಿಯೇ, night halt ಗಳನ್ನು ಸಹ ತೆಗೆದು, ಓಡಿಸುತ್ತಿದ್ದೀರಿ. ಇದರಿಂದ ಜನಗಳಿಗೆ ಅನಾನುಕೂಲವಾಗುತ್ತಿದೆ. ಇದನ್ನು ಪರಿಶೀಲನೆ ಮಾಡಿ ಮೊದಲು ಯಾವ ರೀತಿ ಪ್ರೈವೇಟ್ ಬಸ್‌ಗಳು ಓಡಾಡುತ್ತಿದ್ದವು ಅದೇ ರೀತಿ ವ್ಯವಸ್ಥೆ ಮಾಡಿ ಜನಗಳಿಗೆ ಅನುಕೂಲ ಮಾಡಬೇಕು. ನಿಮ್ಮ ಉತ್ತರ ಸರಿಯಾಗಿಲ್ಲ, ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಖಾಸಗೀ ಮಾಲೀಕರು ನಡೆಸುತ್ತಿದ್ದ ರೀತಿಯಲ್ಲಿ ನಡೆಸಬೇಕು ಎಂದು ತಾವು ಕೇಳುವುದು ಸರಿಯಿರುವುದಿಲ್ಲ. ಆ ರೀತಿ ನಡೆಸುವುದಕ್ಕೆ ಸಾಧ್ಯವಿಲ್ಲ. ಖಾಸಗಿ ಮಾಲೀಕರು ಅನಿವಾರ್ಯವಾಗಿ ಯಾವುದಾದರೂ ರೂಟ್ಸ್ ಸಿಗಲಿ ಸಾಕು ಎಂದು, ಪ್ರಯಾಣಿಕರು ಬರಲಿ, ಬಿಡಲಿ, ಎಂದು ನಡೆಸುತ್ತಿದ್ದರು. ಅದೇ ರೀತಿ ನಾವು ನಡೆಸುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಹೆಚ್ಚು ಓಡಿಸಬೇಕೆಂಬ ಬಗ್ಗೆ ಸಾರ್ವಜನಿಕರಿಂದ ಮನವಿಗಳು ಬಂದಿದೆ, ಅದನ್ನು ಗಮನದಲ್ಲಿಟ್ಟುಕೊಂಡು, ಆ ಭಾಗದಲ್ಲಿ ಸರ್ವೆ ಮಾಡಿಸಿ ಸರಿಕಂಡು ಬಂದರೆ ಓಡಿಸುತ್ತೇವೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಬಸ್ ನಿರ್ವಾಣವನ್ನು ಬದಲಾವಣೆ ಮಾಡಿದ್ದೀರಿ. ಈಗ ಯಾವ ಜಾಗದಲ್ಲಿ ಮಾಡಿದ್ದೀರಿ, ಲಲ್ಲಿ ಈಗ ಬಸ್‌ಗಳು ನಿಲ್ಲುವ ಕಡೆ ಸಾರ್ವಜನರು ಜನ ರಸ್ತೆಯ ಮೇಲೆ ಕುಳಿತಿರುತ್ತಾರೆ. ಅಲ್ಲಿ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ, ಕುಳಿತುಕೊಳ್ಳುವುದಕ್ಕೆ ನೆರಳು ಇಲ್ಲ, ಒಂದು ವರ್ಷದಿಂದಲೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ, ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ಮೊದಲಿನ ಬಸ್ ನಿರ್ವಾಣ ನಮಗೆ ಸೇರಿದ್ದಲ್ಲ. ಅದು ಮುನಿಸಿಪಾಲಿಟಿಯವರಿಗೆ ಸೇರಿದ್ದು. ಅದು ಬಹಳ ಕಿಷ್ಕಿಂಧವಾಗಿತ್ತು. ಬೇರೆ ಒಂದು ಬಸ್ ನಿರ್ವಾಣವನ್ನು ಮಾಡಬೇಕೆಂದು ಆಲೋಚನೆ ಮಾಡಿದ್ದೇವೆ. ಹಣ ಮಂಜೂರಾಗಿದೆ. ಜಾಗ ಸಿಕ್ಕಿಲ್ಲ, ಅದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಖಾಸಗೀ ಮಾಲೀಕರು ಓಡಿಸುತ್ತಿದ್ದ ಮಾರ್ಗಗಳಲ್ಲಿ, ಅಷ್ಟೇ ಬಸ್ಸುಗಳನ್ನು ಓಡಿಸಲು ಸಾಧ್ಯವಿಲ್ಲವೆಂದು ಹೇಳಿದಿರಿ, ಖಾಸಗೀ ಮಾಲೀಕರು ಹತ್ತಾರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ರೂಟ್‌ಗಳನ್ನು ತೆಗೆದುಕೊಂಡು ಲಾಭ ಸಂಪಾದನೆ ಮಾಡುತ್ತಿದ್ದರು. ಈ ಸರ್ಕಾರಿ ಬಸ್‌ಗಳಲ್ಲಿ ಕಂಡಕ್ಟರ್‌ಗಳು ಟಿಕೇಟ್ ಕೊಡದೆ ಹಣ ತಿನ್ನುತ್ತಾ ಇರುವುದರಿಂದ ಸರ್ಕಾರಕ್ಕೆ ಆದಾಯ ಕಡಿಮೆಯಾಗುತ್ತಿದೆ. ಇದನ್ನು ಸರಿಪಡಿಸಿ ಖಾಸಗೀ ಬಸ್ ಮಾಲೀಕರು ಎಲ್ಲೆಲ್ಲಿ ಬಸ್ ಓಡಿಸುತ್ತಿದ್ದರು, ಅಲ್ಲೆಲ್ಲಾ ಬಸ್ ಓಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

Mr. SPEAKER —It is only a piece of advice.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಮೊದಲಿನ ಬಸ್ ನಿರ್ವಾಣ ಬಹಳ ಕಿಷ್ಕಿಂಧವಾಗಿತ್ತು ಎಂದು ಹೇಳಿದಿರಿ. ಮುನಿಸಿಪಾಲಿಟಿ ಜಾಗದಲ್ಲಾಗಲಿ, ಅಥವಾ ಹೊರಭಾಗದಲ್ಲಾಗಲಿ ಬಸ್ ನಿರ್ವಾಣವನ್ನು ನಿರ್ಮಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಹೊಸ ಜಾಗ ತೆಗೆದುಕೊಳ್ಳಲು ಸರ್ವೆ ನಡೆಸುತ್ತಿದ್ದೇವೆ. ಖಾಸಗೀ ಮಾಲೀಕರಿಂದ ಯಾವುದಾದರೂ ಜಾಗ ಸಿಕ್ಕಿದರೆ ಅದನ್ನು ತೆಗೆದುಕೊಳ್ಳೋಣವೆಂದಿದ್ದೇವೆ. ಕೆಲವರು ಮುಂದೆ ಬಂದಿದ್ದಾರೆ. ಸರ್ಕಾರಕ್ಕೆ ಸಂಬಂಧಪಟ್ಟ ಜಾಗಗಳೇನಾದರೂ ಇವೆಯೇ ಎಂದು ನೋಡುತ್ತಿದ್ದೇವೆ. ಒಂದು ಇಲಾಖೆಗೆ ಸಂಬಂಧಪಟ್ಟ ಜಾಗ ಇದೆ, ಅದನ್ನು ನೋಡುತ್ತಿದ್ದೇವೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಈ ಕೆಲಸ ಮುಗಿಯುವುದು ಯಾವಾಗ ?

ಶ್ರೀ ಡಿ. ದೇವರಾಜ ಅರಸ್.—ಎಷ್ಟು ಜಾಗ್ರತೆ ಜಾಗ ಸಿಗುತ್ತದೆ, ಅಷ್ಟು ಜಾಗ್ರತೆ ಕೆಲಸ ಮುಗಿಸುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಬಳ್ಳಾರಿ ಜಿಲ್ಲೆಯಲ್ಲಿ ರಸ್ತೆ ಸಾರಿಗೆಯನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿದ್ದೀರಾ ? ಆ ರೀತಿ ಮಾಡಿದ್ದರೆ ಖಾಸಗೀ ಯವರು ತಮ್ಮ ರೂಟ್‌ಗಳಲ್ಲಿ ಬಸ್ ಓಡಿಸುವುದಕ್ಕೆ ಅನುಮತಿ ತೆಗೆದುಕೊಂಡಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಜಿಲ್ಲೆಗೆ ಒಳಪಟ್ಟು ಮಾತ್ರ ಮಾಡಿದ್ದೇವೆ. ಜಿಲ್ಲೆಯಿಂದ ಜಿಲ್ಲೆಗೆ, ಜಿಲ್ಲೆಯಿಂದ ಹೊರಗೆ ಹೋಗುವ ಬಸ್ ರೂಟ್‌ಗಳನ್ನು ರಾಷ್ಟ್ರೀಕರಣ ಮಾಡಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಸಿರಗುಪ್ಪಾದಿಂದ ಬಳ್ಳಾರಿಗೆ ಖಾಸಗಿಯವರು ಬಸ್ ಓಡಿಸುತ್ತಿದ್ದಾರೆ, ಅದಕ್ಕೆ ಏನು ಮಾಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಅದು ನನ್ನ ಗಮನಕ್ಕೆ ಬಂದಿಲ್ಲ. ನೋಟೀಸ್ ಬೇಕು.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಈ ನಿರ್ವಾಣಕ್ಕೆ ಜಾಗ ಹುಡುಕುವ ಬಗ್ಗೆ ಜಿಲ್ಲೆಯ ಪ್ರಮುಖರನ್ನು ಸೇರಿಸಿ ಮೀಟಿಂಗ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಯಾರು ಪ್ರಮುಖರು ಎಂದು ನನಗೆ ಗೊತ್ತಾಗಲಿಲ್ಲ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಅಸೆಂಬ್ಲಿ ಸದಸ್ಯರು ಪ್ರಮುಖರಾಗುವುದಿಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಅಸೆಂಬ್ಲಿ ಸದಸ್ಯರನ್ನು ಸೇರಿಸಬೇಕೆನ್ನುವ ಅವಶ್ಯಕತೆ ಕಂಡು ಬಂದಿಲ್ಲ.

Fitment of Tacographs for Transport Vehicles.

*Q.—34. Sri A. KRISHNA SETTY (Mangalore II).—

Will the Minister for Transport and Tourism be pleased to state :—

(*a*) whether memorandums and representations have been submitted to the Government by the South Kanara Transport operators' Association in connection with the fitment of tacographs for transport vehicles (Stage Carriage and Goods vehicles) and requesting the Government to drop the provision ;

(*b*) the compelling reasons to make provisions for fitment of tacographs ;

(*c*) the additional expenditure (initial and recurring) involved for fitment of tacographs per vehicle ?

*A.—Sri D. DEVARAJ URS (Minister for Transport and Tourism).—

(*a*) Yes.

(*b*) As tacograph in addition to being a Speedometer, is capable of recording the speed on the graph, fitment of tacographs is made compulsory with a view to checking over speeding of Transport vehicles.

(*c*) Initial expenditure is Rs 900 and the recurring expenditure will be Rs. 18 per month or Rs. 216 per annum.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಸಾರಿಗೆ ಮಾಲೀಕರುಗಳು ಟಾಕೋಗ್ರಾಫ್‌ಗಳನ್ನು ಜೋಡಿಸುವುದಕ್ಕೆ ಸಂಬಂಧಪಟ್ಟಂತೆ ಬಿಡಿ ಭಾಗಗಳೆಲ್ಲಾ ಪರದೇಶಗಳಿಂದ ಬರುತ್ತವೆಂದು ಹೇಳುತ್ತಾರೆ. ಆದರಿಂದ ಫಾರಿನ್-ಎಕ್ಸ್‌ಚೇಂಜ್ ಪ್ರಶ್ನೆ ಬರುತ್ತದೆ. ಈಗ ರಸ್ತೆ ಸಾರಿಗೆ ಇಲಾಖೆಯು ಸಹ ಕಷ್ಟದಲ್ಲಿ ನಡೆಯುತ್ತಿದೆ. ಬಿಡಿ ಭಾಗಗಳ ಬೆಲೆ ಹೆಚ್ಚುತ್ತಿದೆ. ಟಾಕೋಗ್ರಾಫ್‌ಗಳನ್ನು ಜೋಡಿಸುವ ಪ್ರಶ್ನೆಯನ್ನು ಸ್ವಲ್ಪ ಹಿಂದೆ ಹಾಕುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದು ಸರ್ಕಾರದ ಆಲೋಚನೆಯಲ್ಲಿದೆ.

Sri SANJEEVANATH AIKALA.—Will the Government fit these tacographs in their own State carriage buses ; if not why ?

ಶ್ರೀ ಡಿ. ದೇವರಾಜ ಅರಸ್.—ಕ್ಯಾರೇಜ್ ಬಸ್‌ಗಳಿಗೆ ಅಲ್ಲ, ಲಾರಿಗಳಿಗೆ ಮಾತ್ರ.

ಶ್ರೀ ಬಿ. ಭಾಸ್ಕರಶೆಟ್ಟಿ.—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟೂರಿಸ್ಟ್ ಕಾರುಗಳಿವೆ. ಅವುಗಳ ಸ್ಪೀಡ್ ಚೆಕ್ ಮಾಡುವಿಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಟೂರಿಸ್ಟ್ ಕಾರುಗಳ ಸ್ಪೀಡ್ ಚೆಕ್ ಮಾಡಬೇಕಾದ್ದಿಲ್ಲ. ಬಸ್ ಮತ್ತು ಲಾರಿಗಳಿಗೆ ಮಾತ್ರ ಟಾಕೋಗ್ರಾಫ್‌ಗಳನ್ನು ಜೋಡಿಸಬೇಕಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಟಾಕೋಗ್ರಾಫ್‌ಗಳನ್ನು ಜೋಡಿಸುವುದರಿಂದಲೇ ಬರುವ ಅಪಾಯಗಳನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ ಎನ್ನುವ ಆಖ್ಯೆರು ತೀರ್ಮಾನಕ್ಕೆ ಸರ್ಕಾರದವರು ಬಂದಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಕೆಲವರು ಉಪಯೋಗ ಮಾಡಿರತಕ್ಕವರ ಅಭಿಪ್ರಾಯದಲ್ಲಿ ಟಾಕೋಗ್ರಾಫ್‌ಗಳನ್ನು ಜೋಡಿಸುವುದರಿಂದಲೇ ಅನೇಕ ಅನುಕೂಲಗಳಿವೆಯೆಂದು ಗೊತ್ತಾಗಿದೆ.